# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮೈಸೂರು ನಗರ ಸಾರಿಗೆ ವಿಭಾಗ:: ಮೈಸೂರು

ವಿಭಾಗೀಯ ನಿಯಂತ್ರಣಾಧಿಕಾರಿಯವರ ಕಛೇರಿ, ನೆಲ್ಸನ್ ಮಂಡೇಲಾ ರಸ್ತೆ, ಬನ್ನಿಮಂಟಪ, ಮೈಸೂರು – 570015, ದೂರವಾಣಿ ಸಂ. 0821–2494184

**ಸಂ/ಕರಾಸಾ/ಮೈನಸಾವಿ/ಸಂಚಾರ/ವಾಣಿಜ್ಯ/ಜಾಹೀರಾತು/1942/2017–18** **ದಿ: 12.02.2018**

***ಇ–ಟೆಂಡರ್ ಸಂಖ್ಯೆ:08/2017–18***

**ವಿಷಯ**: ಮೈಸೂರು ನಗರ ಸಾರಿಗೆ ವಿಭಾಗಕ್ಕೆ ಸೇರಿದ 36 ವೋಲ್ವೋ (ನಗರ) ವಾಹನಗಳಲ್ಲಿ (ಕವಚದ ಮೇಲೆ ಮಾತ್ರ) ಜಾಹೀರಾತು ಪ್ರದರ್ಶಿಸಲು ಪರವಾನಗಿ ಆಧಾರದ ಮೇಲೆ ನೀಡಲು ಆಸಕ್ತ ವ್ಯಕ್ತಿ/ ಏಜೆನ್ಸಿ/ ಕಂಪನಿಗಳಿಂದ ಅರ್ಜಿ ಆಹ್ವಾನಿಸಿ ಅಲ್ಪಾವಧಿ ಇ–ಟೆಂಡರ್ ಕರೆದಿರುವ ಬಗ್ಗೆ.

*~*~*~*~*

ಮೈಸೂರು ನಗರ ಸಾರಿಗೆ ವಿಭಾಗದ 36 ವೋಲ್ವೋ ವಾಹನಗಳಲ್ಲಿ ಕವಚದ ಮೇಲೆ ಮಾತ್ರ ಜಾಹೀರಾತು ಪ್ರದರ್ಶಿಸಲು ಆಸಕ್ತ ವ್ಯಕ್ತಿ/ ಏಜೆನ್ಸಿ/ ಕಂಪನಿಗಳಿಗೆ ಜಾಹೀರಾತು ಪ್ರದರ್ಶಿಸಲು ಪರವಾನಗಿ ಆಧಾರದ ಮೇಲೆ ಅನುಮತಿ ನೀಡಲು ಆಸಕ್ತ ವ್ಯಕ್ತಿ/ ಏಜೆನ್ಸಿ/ ಕಂಪನಿಗಳಿಂದ ಅರ್ಜಿ ಆಹ್ವಾನಿಸಿ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ .

## ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳು

1. ಪ್ರತಿ ಬಸ್ಸಿಗೆ ರೂ.10,000/– ಗಳನ್ನು ಮಾಸಿಕ ಪರವಾನಗಿ ಶುಲ್ಕ/ ಬಾಡಿಗೆ/ ಜಾಹೀರಾತು ಶುಲ್ಕವಾಗಿ ನಿಗಧಿಪಡಿಸಲಾಗಿದೆ.
2. ಜಾಹೀರಾತು ಪರವಾನಗಿ ಅವಧಿ: ಪರವಾನಗಿ ಅವಧಿ ಎರಡು (2) ವರ್ಷಗಳು ಮಾತ್ರ.
3. **ಇ.ಎಂ.ಡಿ.:–** ಇ.ಎಂಡಿ ಮೊತ್ತ ರೂ. 2,00,000/–( ಎರಡು ಲಕ್ಷ ರೂಪಾಯಿಗಳು ಮಾತ್ರ) ಗಳಲ್ಲಿ ರೂ. 500/– ಅನ್ನು ಇ–ಪೋರ್ಟಲ್ ಮೂಲಕ ಹಾಗೂ ಉಳಿದ ರೂ.1,99,500/– ಅನ್ನು ಡಿ.ಡಿ. ಮೂಲಕ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮೈಸೂರು ನಗರ ಸಾರಿಗೆ ವಿಭಾಗ, ಮೈಸೂರು ರವರ ಹೆಸರಿನಲ್ಲಿ ಪಡೆದು ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು.
4. ಟೆಂಡರ್ ನಲ್ಲಿ ಭಾಗವಹಿಸಲು ಇರುವ ಕನಿಷ್ಟ ಅರ್ಹತೆಗಳು

   ಅ. ಕಂಪನಿಯ ನೋಂದಣಿ ಪ್ರಮಾಣ ಪತ್ರ ಸಲ್ಲಿಸಬೇಕು.

   ಆ. ವಿಳಾಸ ಧೃಢೀಕರಣ ಪತ ಸಲ್ಲಿಸಬೇಕು.

   ಇ. ಜಾಹಿರಾತು ಉದ್ಯಮದಲ್ಲಿ ಕನಿಷ್ಟ 3 ವರ್ಷಗಳ ಅನುಭವವಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕು.

   ಈ. ಅರ್ಜಿದಾರರು ವಾರ್ಷಿಕ ರೂ. 2.00 ಕೋಟಿ ವಹಿವಾಟು ಹೊಂದಿರಬೇಕು.

   ಉ. ಅರ್ಜಿದಾರರು ಬಿ.ಎಂ.ಟಿ.ಸಿ., ಕೆ.ಎಸ್.ಆರ್.ಟಿ.ಸಿ. ಮತ್ತು ಇತರೆ ನಿಗಮಗಳಿಂದ Defaulter ಆಗಿರಬಾರದು.
5. **ಇ.ಎಂ.ಡಿ.** :– ಅರ್ಜಿದಾರರು ನಿಗಧಿತ ಎ.ಎಂ.ಡಿ. ಮೊತ್ತದಲ್ಲಿ ರೂ.500/– ಅನ್ನು ಮಾತ್ರ ಇ–ಪ್ರಕ್ಯೂರ್ ಮೆಂಟ್ ಮೂಲಕ ಹಾಗೂ ಉಳಿದ ಮೊತ್ತಕ್ಕೆ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮೈಸೂರು ನಗರ ಸಾರಿಗೆ ವಿಭಾಗ, ಮೈಸೂರು ರವರ ಹೆಸರಿನಲ್ಲಿ ಡಿ.ಡಿ ಪಡೆದು ಸದರಿ ಡಿ.ಡಿ ಅನ್ನು ಸ್ಕ್ಯಾನ್ ಮಾಡಿ ಅರ್ಜಿ ಶುಲ್ಕದ ಡಿ.ಡಿ ಯೊಂದಿಗೆ ಆನ್ ಮೂಲಕ ಇ–ಪೋರ್ಟಲ್‌ನಲ್ಲಿ ಅಪಲೋಡ್ ಮಾಡುವುದು. ಸದರಿ ಇ.ಎಂ.ಡಿ. ಮೊತ್ತಕ್ಕೆ ಬಡ್ಡಿಯನ್ನು ನೀಡಲಾಗುವುದಿಲ್ಲ. ಆಯ್ಕೆಯಾಗದ ಅರ್ಜಿದಾರರ ಇ.ಎಂ.ಡಿ ಮೊತ್ತವನ್ನು ಟೆಂಡರ್‌ನಲ್ಲಿ ಪರವಾನಗಿದಾರರ ಅಂತಿಮ ಆಯ್ಕೆ ನಡೆದ ನಂತರ ಹಿಂದಿರುಗಿಸಲಾಗುವುದು.

6. ಇ.ಎಂ.ಡಿ. ಮೊತ್ತ ಸಲ್ಲಿಸಿ ಟೆಂಡರ್ ನಲ್ಲಿ ಭಾಗವಹಿಸಿ ಆಯ್ಕೆಯಾದ ಪರವಾನಗಿದಾರರು ಭದ್ರತಾ ಠೇವಣಿ ಮೊತ್ತವನ್ನು ನಿಗಧಿತ ಅವಧಿಯಲ್ಲಿ ಪಾವತಿಸದೇ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಅರ್ಜಿದಾರರ ಇ.ಎಂ.ಡಿ. ಮೊತ್ತವನ್ನು ನಿಗಮದ ನಿಯಮಾವಳಿಗಳ ಅನುಸಾರ ಹಿಂದಿರುಗಿಸಲು ಅವಕಾಶ ಇರುವುದಿಲ್ಲ, ಹಾಗೂ ಸದರಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7. <u>ತೆರವುಗೊಳಿಸುವ ವೆಚ್ಚ</u>: ಪ್ರತಿ ಬಸ್ಸಿಗೆ ರೂ.3000/-. ಜಾಹೀರಾತು ಪ್ರದರ್ಶಿಸಲು ನೀಡಿರುವ ಅನುಮತಿ ಅವಧಿ ಮುಗಿದ ನಂತರ ಏಜನ್ಸಿದಾರರೆ ಜಾಹೀರಾತುಗಳನ್ನು ಸಮರ್ಪಕವಾಗಿ ತೆಗೆದುಹಾಕಿದಲ್ಲಿ ಸಂಬಂಧಪಟ್ಟ ಘಟಕ ವ್ಯವಸ್ಥಾಪಕರಿಂದ ಧೃಡೀಕರಣ ಪತ್ರವನ್ನು ಸ್ವೀಕರಿಸಿದ ನಂತರ ಸದರಿ ಮೊತ್ತವನ್ನು ಮರುಪಾವತಿ ಮಾಡಲಾಗುವುದು.

8. ಪರವಾನಗಿದಾರರಾಗಿ ಆಯ್ಕೆಯದವರು ಕರಾರು ಒಪ್ಪಂದದ ಮೊದಲು ತೆರವುಗೊಳಿಸುವ ವೆಚ್ಚ ಪ್ರತಿ ಬಸ್ಸಿಗೆ ರೂ.3,000/- ಮತ್ತು ಆರ್.ಟಿ.ಓ ತೆರಿಗೆ ಶುಲ್ಕ ಪ್ರತಿ ವಾಹನಕ್ಕೆ ಒಂದು ವರ್ಷಕ್ಕೆ ರೂ.2,500/- ರಂತೆ ನಿಗಮಕ್ಕೆ ಕರಾರು ಒಪ್ಪಂದದ ಮೊದಲು ಪಾವತಿಸಬೇಕು.

9. ಜಾಹೀರಾತುಗಳನ್ನು ಪ್ರದರ್ಶಿಸಲು, ಬಸ್ಸಿನ ಕವಚದ ಬಣ್ಣ ಹಾಳಾಗದಂತೆ ಸುಲಭವಾಗಿ ತೆರವುಗೊಳಿಸಲು ಅನುಕೂಲಕರ ಅಂತರ್‌ರಾಷ್ಟ್ರೀಯ ಗುಣಮಟ್ಟದ *3M* (90-100 *Micron* ದಪ್ಪದ) ಸೆಲ್ಫ ಅಡೆಸಿವ್ ವಿನೈಲ್ ಸ್ಟಿಕ್ಕರ್‌ಗಳನ್ನು ಮಾತ್ರ ಬಳಸುವುದು. )

10. <u>ಕನಿಷ್ಟ ಜಾಹೀರಾತು ವಿಸ್ತೀರ್ಣ:</u> ವಾಹನದ ಕವಚದ ಮೇಲೆ ಜಾಹೀರಾತು ಪ್ರದರ್ಶಿಸಲು ಲಭ್ಯವಿರುವ ಒಟ್ಟು ಜಾಹೀರಾತು ವಿಸ್ತೀರ್ಣವು ಅಂದಾಜು 400 ಚ.ಅಡಿ ( 37.16 ಚ.ಮೀ) ( ಹೊರ ಕವಚದಲ್ಲಿ ಚಾಲಕರ ಕಡೆ 175 ಚ.ಅಡಿ, ಪ್ರಯಾಣಿಕರ ಕಡೆ 156 ಚ.ಅಡಿ, ವಾಹನದ ಹಿಂಬಾಗದಲ್ಲಿ 63 ಚ.ಅಡಿ, ಚಾಲಕರ ಹಿಂಬದಿಯಲ್ಲಿ 2 ಚ.ಅಡಿ) ಹಾಗೂ ಪ್ರಯಾಣಿಕರ ಹಿಡಿಗಳಲ್ಲಿ (Grab Handles) ಮತ್ತು ಪ್ರಯಾಣಿಕರ ಸೀಟುಗಳ ಹಿಂಬಾಗದಲ್ಲಿ ಜಾಹೀರಾತು ಅಳವಡಿಸಬಹುದಾಗಿರುತ್ತದೆ. ಸಂಸ್ಥೆಯ ಲೋಗೋ, ವಾಹನದ ನೋಂದಣಿ ಸಂಖ್ಯೆ, ಘಟಕದ ಹೆಸರು ನಮೂದಿಸಲಾಗಿರುವ ಜಾಗಗಳು, ಕಿಟಕಿ ಮತ್ತು ಬಾಗಿಲಿನ ಗಾಜುಗಳನ್ನು ಹೊರತುಪಡಿಸಿ ಬಸ್ಸಿನ ಎರಡು ಕಡೆಗಳಲ್ಲಿನ ಸಂಪೂರ್ಣ ಕವಚದ ಮೇಲೆ ಹಾಗೂ ಬಸ್ಸಿನ ಒಳಗಡೆ 2 ಅಡಿ ಅಳತೆಯ ಎರಡು ಎಲ್.ಇ.ಡಿ. ಟಿ.ವಿ ಡಿಸ್‌ಪ್ಲೆ ಮೂಲಕ ಜಾಹೀರಾತುಗಳನ್ನು ಪ್ರದರ್ಶಿಸಬಹುದಾಗಿರುತ್ತದೆ. ಬಸ್ಸಿನ ಉಳಿದ ಭಾಗಗಳ ಮೇಲೆ ಜಾಹಿರಾತು ನೀಡಲು ಪರವಾನಗಿದಾರರಿಗೆ ಹಕ್ಕಿರುವುದಿಲ್ಲ.

11. <u>ಅರ್ಜಿ ಶುಲ್ಕ:</u> ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು ಅರ್ಜಿ ಶುಲ್ಕ ಮೊತ್ತ ರೂ.1000/- ಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮೈಸೂರು ನಗರ ಸಾರಿಗೆ ವಿಭಾಗ, ಮೈಸೂರು ರವರ ಹೆಸರಿನಲ್ಲಿ ಡಿ.ಡಿ. ಪಡೆದು ಟೆಂಡರ್ ಸಲ್ಲಿಸುವ ಕಡೆಯ ದಿನಾಂಕದೊಳಗೆ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು. ಹಾಗೂ ಸದರಿ ಡಿ.ಡಿ. ಅನ್ನು ಸ್ಕ್ಯಾನ್ ಮಾಡಿ ಅರ್ಜಿಯೊಂದಿಗೆ ಇ-ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಿ ಮುಖಾಂತರ ಆನ್ ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕಾಗಿರುತ್ತದೆ.

12. ಅರ್ಜಿ ಸಲ್ಲಿಸಬಯಸುವ ವ್ಯಕ್ತಿ/ಕಂಪನಿಗಳು ಇಂಡಿಯನ್ ಪಾರ್ಟನರ್‌ಶಿಪ್ ಆಕ್ಟ್ ಅಡಿಯಲ್ಲಿ ನೋಂದಣಿಯಾಗಿದ್ದರೆ ಸದರಿ ಅವಶ್ಯಕ ನೋಂದಣಿ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

13. ಇ-ಟೆಂಡರ್ ನಲ್ಲಿ ಭಾಗವಹಿಸಿ ಆಯ್ಕೆಯಾದ ವ್ಯಕ್ತಿ/ಕಂಪನಿ ಯು ಬಿಡ್‌ನಲ್ಲಿ ನಮೂದಿಸಿದ ಮಾಸಿಕ ಪರವಾನಗಿ ಶುಲ್ಕದ ಆರು ಪಟ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಮತ್ತು ಒಂದು ತಿಂಗಳ ಪರವಾನಗಿ ಹಾಗೂ ಸೇವಾ

ಶುಲ್ಕದ ಮೊತ್ತವನ್ನು ಆಯ್ಕೆ ಪತ್ರ ತಲುಪಿದ ಏಳು(7) ದಿನಗಳೊಳಗೆ ವಿಭಾಗದಲ್ಲಿ ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕು, ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಭದ್ರತಾ ಠೇವಣಿ ಹಣಕ್ಕೆ ಯಾವದೇ ರೀತಿ ಬಡ್ಡಿ ನೀಡಲಾಗುವುದಿಲ್ಲ. ಆಯ್ಕೆಯಾದ ಅರ್ಜಿದಾರರು ಭದ್ರತಾ ಠೇವಣಿ ಹಣ ಪಾವತಿಸಿ ಕರಾರು ಒಪ್ಪಂದ ಮಾಡಿಕೊಂಡು ಕರಾರು ಅವಧಿ ಮುಗಿದ ನಂತರ ನಿಗಮಕ್ಕೆ ಬರಬೇಕಾದ ಎಲ್ಲಾ ಶುಲ್ಕಗಳನ್ನು ಪಾವತಿಸಿಕೊಂಡ ನಂತರ ಭದ್ರತಾ ಠೇವಣಿ ಹಣವನ್ನು ಹಿಂದಿರುಗಿಸಲಾಗುವುದು.

14. ಪರವಾನಗಿ ಶುಲ್ಕ ಮತ್ತು ಭದ್ರತಾ ಠೇವಣಿ ಹಣವನ್ನು ಪ್ರತಿ ವರ್ಷ ಶೇ.10% ರಂತೆ ಹೆಚ್ಚಿಸಲಾಗುವುದು.
15. ಜಾಹೀರಾತು ಪ್ರದರ್ಶಿಸಲು ಬಸ್ಸುಗಳನ್ನು ಲಭ್ಯವಿರುವ ಮಾರ್ಗಗಳನ್ನು ಹಂಚಿಕೆ ಮಾಡಲಾಗುವುದು. ಇದರಲ್ಲಿ ಯಾವುದೇ ನಿಗದಿತ ಕೋರಿಕೆ ಮಾರ್ಗದ ಆಶ್ವಾಸನೆ ನೀಡಲಾಗುವುದಿಲ್ಲ.
16. ಜಾಹೀರಾತು ಪ್ರದರ್ಶಿಸಲು ಲಭ್ಯವಿರುವ ಬಸ್‌ಗಳಿಗೆ ಈಗಾಗಲೇ ಒಬ್ಬ ವ್ಯಕ್ತಿ/ ಏಜೆನ್ಸಿಯಿಂದ ಆರ್.ಟಿ.ಓ ಶುಲ್ಕ ಪಾವತಿಸಲ್ಪಟ್ಟು ಅನುಮತಿಯನ್ನು ಪಡೆದಿದ್ದಲ್ಲಿ, ಸದರಿ ಅನುಮತಿ ಅವಧಿ ಒಂದು ವರ್ಷದ ವರವಿಗೂ ಚಾಲ್ತಿಯಲ್ಲಿರುವುದರಿಂದ ಅದೇ ವ್ಯಕ್ತಿ/ ಏಜೆನ್ಸಿಯು ಪುನಃ ಆರ್.ಟಿ.ಓ ಶುಲ್ಕ ಪಾವತಿಸುವ ಅವಶ್ಯಕತೆ ಇರುವುದಿಲ್ಲ.
17. **ಮಾಸಿಕ ಪರವಾನಗಿ ಶುಲ್ಕ ಪಾವತಿ**: ಪರವಾನಗಿದಾರರು ಮೊದಲನೇ ತಿಂಗಳ ಪರವಾನಗಿ ಶುಲ್ಕ ಪಾವತಿ ಮಾಡಿದ ನಂತರ ಮುಂದಿನ ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ತಿಂಗಳ ಪ್ರಾಂಭದ ಏಳು(7) ದಿನಗಳೊಳಗೆ ಸೇವಾ ಶುಲ್ಕದೊಂದಿಗೆ ಮುಂಚಿತವಾಗಿ ಪಾವತಿ ಮಾಡಬೇಕು. ತಪ್ಪಿದಲ್ಲಿ ಮಾಸಿಕ ಶೇ 2% ರಂತೆ ಬಡ್ಡಿ ವಿಧಿಸಲಾಗುವುದು.
18. ಆಯ್ಕೆ ಪತ್ರ ಕಳುಹಿಸಿದ ಹದಿನೈದು ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದಲೇ ಪರವಾನಗಿ ಶುಲ್ಕ ಪಾವತಿ ಅವಧಿ ಪ್ರಾರಂಭವಾಗುವುದು. ಭದ್ರತಾ ಠೇವಣಿ ಮತ್ತು ಮಾಸಿಕ ಪರವಾನಗಿ ಮೊತ್ತ ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳದಿದ್ದಲ್ಲಿ ಜಾಹಿರಾತು ಪ್ರದರ್ಶನಕ್ಕೆ ಅವಕಾಶ ನೀಡಲಾಗುವುದಿಲ್ಲ. ಒಂದುವೇಳೆ ನಿಗಧಿತ ಅವಧಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳದಿದ್ದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
19. ಪ್ರತಿ ತಿಂಗಳು ಪರವಾನಗಿ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ತಪ್ಪದೇ ಪಾವತಿಸುವುದು, ಸತತವಾಗಿ ಎರಡು ತಿಂಗಳು ಪರವಾನಗಿ ಶುಲ್ಕ, ಸೇವಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ನಿಗಧಿತ ಅವಧಿಯಲ್ಲಿ ಪಾವತಿಸದೇ ಇದ್ದಲ್ಲಿ ಕೂಡಲೇ ಸದರಿ ಪರವಾನಗಿಯನ್ನು ರದ್ದುಗೊಳಿಸಿ ಜಾಹಿರಾತು ಪ್ರದರ್ಶಿಸುವುದನ್ನು ನಿಲ್ಲಿಸಿ ಸದರಿಯವರ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
20. **ಪರವಾನಗಿದಾರರ ಆಯ್ಕೆ ವಿಧಾನ:** ಇ-ಟೆಂಡರ್ ನಲ್ಲಿ ಹೆಚ್ಚಿನ ಮಾಸಿಕ ಪರವಾನಗಿ ಮೊತ್ತವನ್ನು ನಮೂದಿಸುವ ಅರ್ಜಿದಾರರನ್ನು ಯಶಸ್ವಿ ಪರವಾನಗಿದಾರರನ್ನಾಗಿ ಆಯ್ಕೆ ಮಾಡಲಾಗುವುದು. ಒಂದು ವೇಳೆ ಹೆಚ್ಚಿನ ಪರವಾನಗಿ ಮೊತ್ತವನ್ನು ನಮೂದಿಸಿರುವ ಅರ್ಜಿದಾರರು ಭದ್ರತಾ ಠೇವಣಿ ಸಲ್ಲಿಸಿ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ ಸದರಿಯವರ ಅರ್ಜಿಯನ್ನು ತಿರಸ್ಕರಿಸಿ ಅವರು ನಿಗಮಕ್ಕೆ ಸಲ್ಲಿಸಿರುವ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ನಂತರದ ಎರಡನೇ ಹೆಚ್ಚಿನ ಮೊತ್ತವನ್ನು ನಮೂದಿಸಿರುವ ಅರ್ಜಿದಾರರನ್ನು ಪರವಾನಗಿದಾರರನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಟೆಂಡರ್‌ನಲ್ಲಿ ಯಾವುದೇ ಅರ್ಜಿಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಯ್ದಿರಿಸಿಕೊಂಡಿರುತ್ತದೆ.

21. ನಿಗಧಿತ ಸಮಯ ಹಾಗೂ ದಿನಾಂಕದೊಳಗೆ ಸೂಚಿತ ಇ.ಎಂ.ಡಿ. ಮೊತ್ತವನ್ನು ಇ-ಪೋರ್ಟಲ್ ನಲ್ಲಿ ಸಲ್ಲಿಸಿ ಅವಶ್ಯಕ ದಾಖಲಾತಿಗಳನ್ನು ಅಪಲೋಡ್ ಮಾಡಿ ಅರ್ಜಿಯನ್ನು ಸಲ್ಲಿಸಬೇಕು, ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

22. ಟೆಂಡರ್ ಅವಧಿಯಲ್ಲಿ ಒಮ್ಮೆ ಪರವಾನಗಿ ಶುಲ್ಕವನ್ನು ಘೋಷಿಸಿದ/ನಮೂದಿಸಿದ ನಂತರ ಅರ್ಜಿದಾರರು ಮತ್ತೆ ಯವುದೇ ರೀತಿ ಪರವಾನಗಿ ಮೊತ್ತವನ್ನು ಕಡಿಮೆ ಮಾಡುವ ಅಥವಾ ಹೆಚ್ಚಿಸುವುದಕ್ಕೆ ಅವಕಾಶ ಇರುವುದಿಲ್ಲ, ಒಂದು ವೇಳೆ ಅರ್ಜಿದಾರರು ಈ ರೀತಿ ಮಾಡಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ನಿಗಮವು ಹೊಂದಿರುತ್ತದೆ ಹಾಗೂ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಆಗುವ ನಷ್ಟದ ಸಲುವಾಗಿ ಭಾಗಶಹ ಅಥವಾ ಸಂಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

23. ಜಾಹಿರಾತು ನೀಡಲು ಆಯ್ಕೆಯಾದ ಪರವಾನಗಿದಾರರನ್ನು ಅಥವಾ ಅವರಿಂದ ನೇಮಿಸಲ್ಪಟ್ಟ ಯಾವುದೇ ವ್ಯಕ್ತಿ/ಗುತ್ತಿಗೆದಾರರನ್ನು ಘಟಕದ ಆವರಣಕ್ಕೆ ಪ್ರವೇಶ ನೀಡುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

24. ಪರವಾನಗಿ ಅವಧಿಯಲ್ಲಿ ಜಾಹಿರಾತು ಪ್ರಕಟಿಸುವಾಗ ಅಥವಾ ತೆಗೆಯುವಾಗ ವಾಹನಕ್ಕೆ ಆಗಬಹುದಾದ ಹಾನಿಯನ್ನು ನಿಗಮಕ್ಕೆ ಭರಿಸುವುದು ಪರವಾನಿಗದಾರರ ಕರ್ತವ್ಯವಾಗಿರುತ್ತದೆ.

25. ಪರವಾನಗಿದಾರರು ವಾಹನಗಳ ಮೇಲೆ ಜಾಹಿರಾತು ಪ್ರದರ್ಶಿಸುವ ಸಂಬಂಧ ನಿಗಮಕ್ಕೆ ಅವಶ್ಯಕವಾದ ಮಾಹಿತಿಯನ್ನು ಕಾಲಕಾಲಕ್ಕೆ ಒದಗಿಸಬೇಕಾಗಿರುತ್ತದೆ.

26. ಜಾಹಿರಾತನ್ನು ಅಳವಡಿಸಿದ ವಾಹನವು ತಾಂತ್ರಿಕ ದೋಷ/ಅಪಘಾತ/ವಾರ್ಷಿಕ ನವೀಕರಣ ಅಥವಾ ಇನ್ನಾವುದೇ ಇತರೆ ಕಾರಣಗಳಿಂದಾಗಿ ಕಾರ್ಯಾಚರಣೆಗೆ ನಿಯೋಜನೆಗೊಳ್ಳದಿದ್ದಲ್ಲಿ ಅಂತಹ ಅವಧಿ ಒಂದು ತಿಂಗಳಲ್ಲಿ ಒಟ್ಟಾರೆ 15 ದಿನ ಅಥವಾ ಅದಕ್ಕೆ ಮೀರಿದಲ್ಲಿ ಪರಿಶೀಲಿಸಿ ಸದರಿ ಅವಧಿಗೆ ತಕ್ಕಂತೆ ಪರವಾನಗಿದಾರರಿಗೆ ಪರವಾನಗಿ ಶುಲ್ಕದಲ್ಲಿ ವಿನಾಯಿತಿ/ಕಡಿತ ನೀಡಲಾಗುವುದು.

27. ಸಂಪೂರ್ಣ ಜಾಹೀರಾತಿನ ಶೇ10% ರ ಜಾಹೀರಾತು ಭಾಗವು ಸಾರ್ವಜನಿಕ ಹಿತಾಸಕ್ತಿ/ ಅರಿವು ಮೂಡಿಸುವಂತಹ ಅಂಶಗಳನ್ನು ತಪ್ಪದೇ ಪ್ರದರ್ಶಿಸುವಂತಿರತಕ್ಕದ್ದು.

28. ನಿಗಮವು ಪರವಾನಗಿದಾರರಿಗೆ ಜಾಹಿರಾತು ಪ್ರದರ್ಶಿಸಲು ವಾಹನಗಳನ್ನು ಒದಗಿಸದೇ ಹೋದಲ್ಲಿ ಎಷ್ಟು ವಾಹನಗಳಿಗೆ ಒದಗಿಸಿರುವುದಿಲ್ಲವೋ ಅಷ್ಟು ವಾಹನಗಳಿಗೆ ಪರವಾನಗಿ ಶುಲ್ಕವನ್ನು ಕಡಿತಗೊಳಿಸಲಾಗುವುದು ಅಥವಾ ಎಷ್ಟು ವಾಹನಗಳನ್ನು ಜಾಹಿರಾತು ಪ್ರದರ್ಶಿಸಲು ಒದಗಿಸಲಾಗಿದೆಯೋ ಅಷ್ಟು ವಾಹನಗಳಿಗೆ ಮಾತ್ರ ಪರವಾನಗಿ ಶುಲ್ಕವನ್ನು ವಿಧಿಸಲಾಗುವುದು.

29. ಏಜೆನ್ಸಿದಾರರು ತಮ್ಮ ವಹಿವಾಟಿಗೆ ಸಂಬಂಧಿಸಿದ ಸೇವಾ ತೆರಿಗೆ, ಜಾಹೀರಾತು ತೆರಿಗೆ, ಇತರೆ ತೆರಿಗೆಗಳು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ಇತರೆ ಶುಲ್ಕ/ ಮೊತ್ತ, ಸ್ಥಳೀಯ/ ಮೈಸೂರು ಮಹಾನಗರ ಪಾಲಿಕೆ/ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಅಥವಾ ಇತರೆ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಜಾಹೀರಾತು ಶುಲ್ಕ/ತೆರಿಗೆಗಳನ್ನು ಭರಿಸತಕ್ಕದ್ದು. ಪರವಾನಗಿಯ ಮಧ್ಯಾವಧಿಯಲ್ಲಿ ಜಾಹೀರಾತಿಗೆ ಸಂಬಂಧಿಸಿದ ತೆರಿಗೆಗಳನ್ನು ರಾಜ್ಯ/ಕೇಂದ್ರ/ಸರ್ಕಾರಿ ಅಂಗ ಸಂಸ್ಥೆಗಳು ಹೆಚ್ಚಿಸಿದಲ್ಲಿ, ಹೆಚ್ಚಾದ ಜಾಹೀರಾತು ಶುಲ್ಕಗಳನ್ನು ಏಜೆನ್ಸಿದಾರರು ಪಾವತಿಸತಕ್ಕದ್ದು.

30. ಎಲ್ಲಾ ಪಾವತಿಗಳನ್ನು " ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಮೈಸೂರು ನಗರ ಸಾರಿಗೆ ವಿಭಾಗ, ಮೈಸೂರು", ರವರ ಹೆಸರಿನಲ್ಲಿ ಡಿ.ಡಿ. ಮೂಲಕ ಸಲ್ಲಿಸುವುದು.

31. ಸಾರ್ವಜನಿಕರಿಗೆ ದಕ್ಕೆಯಾಗುವಂತಹ ಮತ್ತು ಪ್ರಚೋದನಕಾರಿಯಾದಂತಹ ಜಾಹೀರಾತುಗಳನ್ನು ಯಾವುದೇ ವ್ಯಕ್ತಿ /ಏಜೆನ್ಸಿಯು ಪ್ರದರ್ಶಿಸುವಂತಿರುವುದಿಲ್ಲ. ಅಂತಹ ಜಾಹೀರಾತುಗಳನ್ನು ನಿರ್ಭಂದಿಸುವ/ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಹೊಂದಿರುತ್ತದೆ. ಸದರಿ ನಿರ್ಭಂದಿಸಿದ/ ತಿರಸ್ಕರಿಸಿದ ಜಾಹೀರಾತುಗಳಿಂದ ಆಗುವಂತಹ ನಷ್ಟವನ್ನು ತುಂಬಿಕೊಡುವಂತೆ ಏಜೆನ್ಸಿಯು ಕೋರಿಕೆ ಸಲ್ಲಿಸುವಂತಿಲ್ಲ. ಕಾನೂನಿನ ಅಡಿಯಲ್ಲಿ ನಿರ್ಭಂದಿಸಲಾಗಿರುವ ಹೊಗೆಸೊಪ್ಪು, ಮಧ್ಯಪಾನ ವಸ್ತುಗಳು, ಮಾದಕ ವಸ್ತುಗಳು ಹಾಗೂ ಅಸಹ್ಯಕರವಾದ ಇತರೆ ಯಾವುದೇ ಜಾಹೀರಾತುಗಳನ್ನು ಪ್ರದರ್ಶಿಸುವಂತಿರುವುದಿಲ್ಲ.

32. ಘಟಕದಲ್ಲಿ ಬಸ್ಸುಗಳು ಕಾರ್ಯಾಚರಣೆಯಲ್ಲಿರದ ಸಮಯದಲ್ಲಿ ಏಜೆನ್ಸಿಯು ಬಸ್ಸುಗಳ ಮೇಲೆ ಜಾಹೀರಾತುಗಳನ್ನು ಅಳವಡಿಸಬೇಕಾಗಿರುತ್ತದೆ. ಜಾಹೀರಾತು ಪ್ರದರ್ಶಿಸಲೆಂದೇ ಬಸ್ಸುಗಳನ್ನು ಘಟಕದಲ್ಲಿ ಉಳಿಸಿಕೊಳ್ಳುವ ಹಕ್ಕು ಏಜೆನ್ಸಿಗೆ ಇರುವುದಿಲ್ಲ.

33. ಜಾಹೀರಾತು ಪ್ರದರ್ಶಿಸುವ ಮೊದಲು ಜಾಹೀರಾತಿನ ಅಂಶಗಳನ್ನು ಅನುಮೋದನೆಗಾಗಿ ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಮೈಸೂರು ನಗರ ಸಾರಿಗೆ ವಿಭಾಗ, ಮೈಸೂರು ರವರಿಗೆ ಸಲ್ಲಿಸಬೇಕಾಗಿರುತ್ತದೆ. ಸಂಸ್ಥೆಯ ಹಾಗೂ ಸಾರ್ವಜನಿಕರ ಹಿತಾಸಕ್ತಿ ದೃಷ್ಟಿಯಿಂದ ಆಕ್ಷೇಪಣೀಯವಾಗಿದ್ದಲ್ಲಿ ಸದರಿ ಜಾಹೀರಾತಿನ ಸಂಪೂರ್ಣ/ ಭಾಗಶಃ ಭಾಗವನ್ನು ತಿರಸ್ಕರಿಸುವ ಹಕ್ಕು ವಿಭಾಗೀಯ ನಿಯಂತ್ರಣಾಧಿಕಾರಿ ಯವರಿಗೆ ಇರುತ್ತದೆ.

34. ಜಾಹೀರಾತುಗಳನ್ನು ಕನ್ನಡದಲ್ಲಿಯೂ ಸಹ ತಪ್ಪದೇ ಪ್ರದರ್ಶಿಸತಕ್ಕದ್ದು.

35. ಉಭಯ ಪಾರ್ಟಿಗಳ ಮಧ್ಯೆ ಯಾವುದೇ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ತಕರಾರು ಅಥವಾ ಭಿನ್ನಾಭಿಪ್ರಾಯ ಉಂಟಾದಲ್ಲಿ ಕರ್ನಾಟಕರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕರ ತೀರ್ಮಾನ ಅಂತಿಮವಾಗಿರುತ್ತದೆ, ಸದರಿ ಷರತ್ತಿಗೆ ಅರ್ಜಿದಾರರು ಸಮ್ಮತಿ ಹೊಂದಿರುತ್ತಾರೆ.

36. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಟೆಂಡರ್ ನಲ್ಲಿ ಮಂಜೂರು/ನಿಗಧಿ ಮಾಡಿರುವ ಪ್ರಮಾಣಕ್ಕಿಂತ ಶೇ.25% ರಷ್ಟನ್ನು ಹೆಚ್ಚಿಸುವ/ಕಡಿಮೆ ಮಾಡುವ ಹಕ್ಕನ್ನು ಕೆ.ಟಿ.ಟಿ.ಪಿ ಕಾಯ್ದೆ 1999 ರ ಅನುಸಾರ ಕಾಯ್ದಿರಿಸಿಕೊಂಡಿರುತ್ತದೆ.

37. ಈ ಒಪ್ಪಂದ/ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೈಮುಗಳನ್ನು ಪರಿಹರಿಸಿ ಕೊಳ್ಳುವುದಕ್ಕಾಗಿ ಎರಡನೇ ಪಾರ್ಟಿಯವರು ಅಂತಹ ವಿವಾದವನ್ನು ಕರ್ನಾಟಕ (ಕೇಂದ್ರ, ದೇಶೀಯ,ಅಂತರ್‌ದೇಶೀಯ) ನಿಯಮಗಳು 2012ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಿಕೊಳ್ಳಬೇಕಾಗಿರುತ್ತದೆ

38. ಉಳಿದಂತೆ ಸಂಸ್ಥೆಯ ಇತರೆ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ.

**ಸಹಿ/-**

**ವಿಭಾಗೀಯ ನಿಯಂತ್ರಣಾಧಿಕಾರಿ**
**ಮೈಸೂರು ನಗರ ಸಾರಿಗೆ ವಿಭಾಗ**
**(ಟೆಂಡರ್ ಆಹ್ವಾನಿತ ಪ್ರಾಧಿಕಾರ)**